## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಯುಜಿಸಿ 6ನೇ ವೇತನ ಆಯೋಗ ಜಾರಿ ಮಾಡಿದ ವೇತನ ಶ್ರೇಣಿಯ ಹಿಂಬಾಕಿಯನ್ನು ಕಾಲೇಜು ಶಿಕ್ಷಣ ಇಲಾಖೆ/ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ ಖಾಸಗಿ ಅನುದಾನಿತ ಕಾಲೇಜುಗಳು/ ವಿಶ್ವವಿದ್ಯಾಲಯಗಳು/ ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಹಾಗೂ ಅನುದಾನಿತ ಇಂಜಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಪಾವತಿಸುವ ಬಗ್ಗೆ.

ಓದಲಾಗಿದೆ: 1)ಸರ್ಕಾರ ಆದೇಶ ಸಂಖ್ಯೆ:ಇಡಿ 311 ಯುಎನ್‌ಇ 2012 ದಿನಾಂಕ 23-01-2014
2)ಸರ್ಕಾರ ಆದೇಶ ಸಂಖ್ಯೆ:ಆಇ 05 ಬಿಆರ್‌ಎಸ್ 2014 ದಿನಾಂಕ 08-05-2014

******

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ದಿನಾಂಕ 01-01-2006 ರಿಂದ 31-03-2010ರವರೆಗೆ ನೀಡಬೇಕಾಗಿರುವ ಯುಜಿಸಿಯ ಪರಿಷ್ಕೃತ ಬಾಕಿ ವೇತನ ಮೊತ್ತದಲ್ಲಿ ಬಿಡುಗಡೆ ಮಾಡಬೇಕಾಗಿರುವ ಎರಡನೇ ಕಂತಿನ ಮೊತ್ತವಾಗಿ ಯೋಜನೇತರ ಬಾಬ್ತಿನಡಿ ರೂ.150.00 ಕೋಟಿಗಳನ್ನು ಮತ್ತು ಯೋಜನೆ ಬಾಬ್ತಿನಡಿ ರೂ. 15.00 ಕೋಟಿಗಳಂತೆ ಒಟ್ಟು ರೂ.165.00 ಕೋಟಿಗಳನ್ನು ಲೆಕ್ಕ ಶೀರ್ಷಿಕೆ 2202-03-103-2-06-101(ಯೋಜನೇತರ) ಬಿಡುಗಡೆ ಮಾಡಲಾಗಿದೆ.

ಉಲ್ಲೇಖ (2) ಆದೇಶದಲ್ಲಿ, ಲೆಕ್ಕ ಶೀರ್ಷಿಕೆ 2202-03-103-2-06-101(ಯೋಜನೇತರ)ರಡಿ ರೂ.5000.00 ಲಕ್ಷಗಳು ಹಾಗೂ ಇದೇ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ ರೂ.528.29 ಲಕ್ಷಗಳನ್ನು ಒಟ್ಟು ರೂ.5528.29 ಲಕ್ಷ ಮಾತ್ರ ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಖಾಸಗಿ ಅನುದಾನಿತ ಕಾಲೇಜುಗಳು/ವಿಶ್ವವಿದ್ಯಾಲಯಗಳು/ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಹಾಗೂ ಅನುದಾನಿತ ಇಂಜಿಯರಿಂಗ್ ಕಾಲೇಜುಗಳ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಮೇಲೆ ತಿಳಿಸಿದ ಯು.ಜಿ.ಸಿ ವೇತನ ಬಾಕಿ ಮೊತ್ತವನ್ನು ದಿನಾಂಕ 23-12-2009ರ ಹಿಂದಿನ ಅವಧಿಗೆ ಹಾಗೂ ಎ.ಐ.ಸಿ.ಟಿ.ಇ ಗೆ ಸಂಬಂಧಿಸಿದಂತೆ ದಿನಾಂಕ:31-03-2010 ರಿಂದ ಹಿಂದಿನ ಅವಧಿಗೆ ಹೊಂದಾಣಿಕೆ ಮಾಡಿ ಬಿಡುಗಡೆ ಮಾಡಲು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಪ್ರತ್ಯೇಕ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಆದೇಶ.

### ಸರ್ಕಾರಿ ಆದೇಶ ಸಂ. ಇಡಿ 311 ಯುಎನ್‌ಇ 2012, ಬೆಂಗಳೂರು, ದಿನಾಂಕ 26-05-2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಲೆಕ್ಕ ಶೀರ್ಷಿಕೆ 2202-03-103-2-06-101(ಯೋಜನೇತರ)ರಡಿ ರೂ.5000.00 ಲಕ್ಷಗಳು ಹಾಗೂ ಇದೇ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ ರೂ.528.29 ಲಕ್ಷಗಳನ್ನು ಒಟ್ಟು ರೂ.5528.29 ಲಕ್ಷ ಮಾತ್ರ ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಖಾಸಗಿ ಅನುದಾನಿತ ಕಾಲೇಜುಗಳು/ವಿಶ್ವವಿದ್ಯಾಲಯಗಳು/ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಹಾಗೂ ಅನುದಾನಿತ ಇಂಜಿಯರಿಂಗ್ ಕಾಲೇಜುಗಳ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಈ ಆದೇಶಕ್ಕೆ ಲಗತ್ತಿಸಿಡ ವಿವರಣಾ ಪಟ್ಟಿಗಳಂತೆ ಪುನರ್ವಿನಿಯೋಗ ಮಾಡಿಕೊಳ್ಳಲು ಮಂಜೂರಾತಿ ನೀಡಿದೆ ಮೇಲೆ ತಿಳಿಸಿದ ಯು.ಜಿ.ಸಿ ವೇತನ ಬಾಕಿ ಮೊತ್ತವನ್ನು ದಿನಾಂಕ 23-12-2009ರ ಹಿಂದಿನ ಅವಧಿಗೆ ಹಾಗೂ ಎ.ಐ.ಸಿ.ಟಿ.ಇಗೆ ಸಂಬಂಧಿಸಿದಂತೆ ದಿನಾಂಕ:31-03-2010 ರಿಂದ ಹಿಂದಿನ ಅವಧಿಗೆ ಹೊಂದಾಣಿಕೆ ಮಾಡಿ ಬಿಡುಗಡೆ ಮಾಡಿದೆ.

...2

ಈ. ಆದೇಶವನ್ನು ಆರ್ಥಿಕ ಇಲಾಖೆಯು ಹೊರಡಿಸಿರುವ ಆದೇಶ ಸಂ. ಆಇ 05 ಬಿಆರ್‌ಎಸ್ 2014 ದಿನಾಂಕ 08-05-2014ರ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಪ್ರಕಾಶ್‌ರಾವ್ ಕೇಸರ್‌ಕರ್), 26/5/14
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

ಇವರಿಗೆ:

1. ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2. ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
4. ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
5. ಕುಲಪತಿಗಳು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.
6. ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
7. ಕುಲಪತಿಗಳು, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ
8. ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ, ತುಮಕೂರು.
9. ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
10. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
11. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
12. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
13. ಜಂಟಿ ನಿರ್ದೇಶಕರು, ಟಿ.ಎನ್.ಎಂ.ಸಿ. ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7 & 8)
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.